# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 350(462)

ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತ)

ಉತ್ತರಿಸುವ ದಿನಾಂಕ : 10.03.2025.

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು .

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | Annual Status of Education Report ವರದಿಯನ್ವಯ ರಾಜ್ಯದಲ್ಲಿ ಶೇ.32.7 ರಷ್ಟು ಒಂದನೇ ತರಗತಿಯ ಮಕ್ಕಳು ಅಕ್ಷರಗಳನ್ನು ಗುರುತಿಸಲು ಮತ್ತು ಶೇ.39.8 ರಷ್ಟು ಮಕ್ಕಳು ಪದಗಳನ್ನು ಓದಲು ಸಾಧ್ಯವಾಗುತ್ತಿಲ್ಲ ಎಂದು ವರದಿ ಬಹಿರಂಗ ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಸದರಿ ವರದಿಯನುಸಾರ ರಾಜ್ಯದಲ್ಲಿ ಕನಿಷ್ಠ 43000 ಶಿಕ್ಷಕರ ಹುದ್ದೆಗಳು ಖಾಲಿ ಇದ್ದು ಒಂದನೇ ತರಗತಿಯಿಂದ ಮೂರನೇ ತರಗತಿಯವರೆಗಿನ ವಿದ್ಯಾರ್ಥಿಗಳು ಒಂದೇ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಒಟ್ಟಿಗೆ ಕಲಿಯಬೇಕಾದ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | • ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪ್ರಸ್ತುತ ಬೋಧಕ ವೃಂದಗಳ ಒಟ್ಟು 49729 ಹುದ್ದೆಗಳು ಖಾಲಿ ಇರುತ್ತವೆ.<br>• ಶಿಕ್ಷಕರ ಹುದ್ದೆಗಳು ಖಾಲಿ ಇರುವುದರಿಂದ 1ನೇ ತರಗತಿಯಿಂದ 3ನೇ ತರಗತಿಯವರೆಗಿನ ವಿದ್ಯಾರ್ಥಿಗಳು ಒಂದೇ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಒಟ್ಟಿಗೆ ಕಲಿಯಬೇಕಾದ ಪರಿಸ್ಥಿತಿ ಉಂಟಾಗಿರುವುದಿಲ್ಲ.<br>• ಆದರೆ ಒಂದರಿಂದ ಮೂರನೇ ತರಗತಿಯ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಆಧರಿಸಿ ಮಕ್ಕಳ ಗುಂಪು ರಚಿಸಿ ಕಲಿಕಾ ಕಾರ್ಡುಗಳ ಬಳಕೆ ಮತ್ತು ಚಟುವಟಿಕೆ ಆಧಾರಿತ ನಲಿ ಕಲಿ ಎಂಬ ವಿನೂತನ ಕಲಿಕಾ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ. |

| | | |
|---|---|---|
| | | •ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇದ್ದ ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8 ನೇ ತರಗತಿ) 15000 ಹುದ್ದೆಗಳ ನೇಮಕಾತಿಗಾಗಿ ದಿನಾಂಕ 21.03.2022 ರಂದು ಅಧಿಸೂಚಿಸಲಾಗಿತ್ತು. 15000 ಹುದ್ದೆಗಳಿಗೆ ಎದುರಾಗಿ ಒಟ್ಟು 13352 ಅಭ್ಯರ್ಥಿಗಳು ಅರ್ಹರಾಗಿದ್ದು, ಈ ಪೈಕಿ 12285 ಅಭ್ಯರ್ಥಿಗಳಿಗೆ ಈಗಾಗಲೇ ಕೌನ್ಸಿಲಿಂಗ್ ಮೂಲಕ ಶಾಲೆಗಳಿಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.<br>•ಅವಶ್ಯಕತೆ ಇರುವ ಪಿಎಸ್‌ಟಿ ಹಾಗೂ ಜಿಪಿಟಿ ವೃಂದದ ಖಾಲಿ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಒಟ್ಟು 35000 ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಮೂಲಕ ಶಿಕ್ಷಕರ ಕೊರತೆಯನ್ನು ನೀಗಿಸಲಾಗಿದೆ.<br>•ಸರ್ಕಾರದ ಆದೇಶ ಸಂಖ್ಯೆ: ಇಪಿ 230 ಪಿಬಿಎಸ್ 2024, ದಿನಾಂಕ:07.10.2024ರನ್ವಯ ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗಳಲ್ಲಿ ಖಾಲಿಯಿರುವ ಪ್ರಾಥಮಿಕ ಶಾಲೆಗಳ 4882 ಹಾಗೂ ಪ್ರೌಢಶಾಲೆಗಳ 385 ಹುದ್ದೆಗಳನ್ನು ಸೇರಿ ಒಟ್ಟು 5267 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.<br>•ಸಿಆಸುಇ 388 ಸೇನೇನಿ 2024 ದಿನಾಂಕ: 25/11/2024ರ ಆದೇಶದಲ್ಲಿ ದಿನಾಂಕ 28/10/2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ |

| | | |
|---|---|---|
| | | ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಸೂಚಿಸಲಾಗಿದೆ. |
| ಇ) | ವಿದ್ಯಾರ್ಥಿಗಳಲ್ಲಿ ಭಾವನಾತ್ಮಕ ಬೆಳವಣಿಗೆಗೆ ದೈಹಿಕ ಚಟುವಟಿಕೆ, ಹೊರಾಂಗಣ ಆಟ ಮತ್ತು ನೇರ ಮಾನವ ಸಂವಹನ ಅತ್ಯಗತ್ಯವಾಗಿರುವ ಈ ವಯಸ್ಸಿನಲ್ಲಿ ಸ್ಮಾರ್ಟ್ ಫೋನ್‌ಗಳ ಮೇಲಿನ ಅವಲಂಬನೆ ಹೆಚ್ಚಾಗುತ್ತಿದ್ದು, ಮಕ್ಕಳು ತಮ್ಮ ಒಟ್ಟಾರೆ ಯೋಗಕ್ಷೇಮವನ್ನು ರೂಪಿಸುವ ಅನುಭವಗಳಿಂದ ದೂರ ಸರಿಯುತ್ತಿರುವುದು ನಿಜವೇ; | ಹೌದು |
| ಈ) | ವಿದ್ಯಾರ್ಥಿಗಳು ಶಿಕ್ಷಣ, ಮನರಂಜನೆ ಮತ್ತು ಸಂವಹನಕ್ಕಾಗಿ ಸ್ಮಾರ್ಟ್ ಫೋನ್‌ಗಳನ್ನು ಪೂರ್ವನಿಯೋಜಿತ ಪರಿಹಾರವಾಗಿ ಬಳಸುತ್ತಿದ್ದು, ಇದು ಚಿಕ್ಕ ವಯಸ್ಸಿನಲ್ಲಿಯೇ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು<br>• ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಸಹಯೋಗದಲ್ಲಿ ಆಯುಷ್ಮಾನ್ ಭಾರತ್ ಯೋಜನೆಯಡಿ ಶಾಲೆಗಳಲ್ಲಿ ಶಾಲಾ ಆರೋಗ್ಯ ಮತ್ತು ಕ್ಷೇಮ ಕಾರ್ಯಕ್ರಮದ ಅನುಷ್ಠಾನಕ್ಕಾಗಿ DSERT ಯಿಂದ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ. ತರಬೇತಿಯ 11 ಮಾಡ್ಯೂಲ್ ಗಳಲ್ಲಿ ಸಮೂಹ ಮಾಧ್ಯಮಗಳ ಹಾಗೂ ಅಂತರ್ ಜಾಲದ ಸುರಕ್ಷಿತ ಬಳಕೆ ಕೂಡ ಒಂದು ಮಾಡ್ಯೂಲ್ ಆಗಿರುತ್ತದೆ. |

| | | |
|---|---|---|
| | | • 2023–24ನೇ ಸಾಲಿನಲ್ಲಿ ಅಂತರ್ ಜಾಲ ಹಾಗೂ ಸಾಮಾಜಿಕ ಮಾಧ್ಯಮಗಳ ಮತ್ತು ಮೊಬೈಲ್ ಸುರಕ್ಷಿತ ಬಳಕೆಯ ಬಗ್ಗೆ ಅರಿವು ಮೂಡಿಸಲು Poster ಸಿದ್ಧಪಡಿಸಿ ಶಾಲೆಗಳಿಗೆ ವಿತರಿಸಲಾಗಿದೆ.<br>• ವಿಷಯಕ್ಕೆ ಸಂಬಂಧಿಸಿದಂತೆ ವಿಡಿಯೋಗಳ (IEC Material) ಮೂಲಕ ತಿಳುವಳಿಕೆ ಮೂಡಿಸಲಾಗುತ್ತಿದೆ. |
| ಉ) | Annual Status of Education Report ವರದಿ ಮತ್ತು ವಿದ್ಯಾರ್ಥಿಗಳ ಸಮಸ್ಯಗಳ ಕುರಿತು ಸರ್ಕಾರದ ವತಿಯಿಂದ ಕೈಗೊಂಡಿರುವ ಕ್ರಮಗಳಾವುವು? (ವಿವರವಾದ ಮಾಹಿತಿ ನೀಡುವುದು) | **FLN (Foundational Literacy and Numeracy):**<br>2024–25 ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭದಲ್ಲಿ ರಾಜ್ಯ ಮಟ್ಟದ FLN (Foundational Literacy and Numeracy) ವಿಚಾರಗೋಷ್ಠಿಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಒಳಗೊಂಡಂತೆ FLN ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ಸಂಬಂಧ ಸುತ್ತೋಲೆಯನ್ನು ಸಿದ್ಧಪಡಿಸಿ ಡಯಟ್‌ಗಳ ಮುಖಾಂತರ ಅನುಷ್ಠಾನ ಅಧಿಕಾರಿಗಳು ಮತ್ತು ಶಾಲೆಗಳಿಗೆ ಕಳುಹಿಸಿಕೊಡಲಾಗಿದೆ.<br>• 1 ರಿಂದ 3 ನೇ ತರಗತಿಯ ಕಲಿಕಾ ಫಲಗಳನ್ನು ಆಧರಿಸಿ ಭಾಷೆ ಮತ್ತು ಗಣಿತಕ್ಕೆ ತಲಾ 10 ಕಲಿಕಾಫಲಗಳನ್ನು ನಿಗದಿಪಡಿಸಿ 4 ರಿಂದ 10 ನೇ ತರಗತಿಯಲ್ಲಿ ಮಕ್ಕಳನ್ನು ಗುರುತಿಸಿ FLN ಸಾಧಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>• FLN ಸಾಧಿಸಲು ಅಗತ್ಯವಿರುವ ಚಟುವಟಿಕಾ ಸಾಹಿತ್ಯಗಳನ್ನು ಡಯಟ್‌ಗಳಲ್ಲಿ ಸಿದ್ಧಪಡಿಸಿ ತರಬೇತಿಯನ್ನು ನೀಡುವ ಮುಖಾಂತರ FLN ಸಾಧಿಸಲು ಕ್ರಮ ಕೈಗೊಂಡಿರುತ್ತಾರೆ.<br>• FLN ಕಾರ್ಯಕ್ರಮದ ಅನುಷ್ಠಾನ ಸಂಬಂಧ |

| | | |
|---|---|---|
| | | ಎಲ್ಲಾ ಡಯಟ್‌ಗಳ ಮೂಲಕ ಭಾಷಾ ಮತ್ತು ಗಣಿತ ಮಾಸಾಚರಣೆಗಳನ್ನು ನಡೆಸುವ ಮೂಲಕ FLN ಸಾಧನೆಗೆ ಕ್ರಮ ವಹಿಸಲಾಗಿದೆ.<br>• FLN ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ, ಜಿಲ್ಲೆ ಬ್ಲಾಕ್ ಮತ್ತು ಕ್ಲಸ್ಟರ್ ಹಂತದಲ್ಲಿ FLN ಕೋಶವನ್ನು ಸ್ಥಾಪಿಸಿ ಈ ಮೂಲಕ FLN ಕಾರ್ಯಕ್ರಮಗಳನ್ನು ಅನುಪಾಲನೆ ಮಾಡಲಾಗಿದೆ.<br>• ಈ ಸಂಬಂಧ, ಅನುಷ್ಠಾನ ಅಧಿಕಾರಿಗಳಾದ ಡಯಟ್ ನೋಡಲ್ ಅಧಿಕಾರಿ, FLN ಕೋಶದ ಸದಸ್ಯರು, ಆಯ್ದ BRC, BRP, CRP, ಶಿಕ್ಷಕರಿಗೆ FLN ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಸಂಬಂಧ ರಾಜ್ಯ ಹಂತದಲ್ಲಿ ಕಾರ್ಯಾಗಾರವನ್ನು ನಡೆಸಿ ಮಾರ್ಗದರ್ಶನ ನೀಡಲಾಗಿದೆ.<br>• FLN ಸಾಧಿಸಿದ ಶಾಲೆಗಳ ಮುಖ್ಯಸ್ಥರು FLN ಸಾಧಿಸಿದ ಶಾಲೆ ಎಂಬ ಸ್ವಯಂ ಘೋಷಣೆಯನ್ನು ಮಾಡಿಕೊಂಡಿರುವುದನ್ನು ಡಯಟ್‌ಗಳ ಮೂಲಕ ಖಾತ್ರಿ ಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ಎಲ್ಲಾ ಶಾಲೆಗಳನ್ನು FLN ಸಾಧನೆ ಮಾಡಿದ ಶಾಲೆಗಳನ್ನಾಗಿ ಪರಿವರ್ತಿಸುವುದನ್ನು ಉತ್ತೇಜಿಸಲು ಡಯಟ್‌ಗಳ ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>• ಸರ್ಕಾರೇತರ ಸಂಸ್ಥೆಗಳ(Akshara Foundation, Pratham, Mantra for Change) ಸಹಕಾರದೊಂದಿಗೆ FLN ಸಾಧಿಸಲು ಚಟುವಟಿಕೆಗಳನ್ನು ಡಯಟ್‌ಗಳ ಹಂತದಲ್ಲಿ ಹಮ್ಮಿಕೊಳ್ಳಲಾಗಿದೆ. |

ಓದು ಕರ್ನಾಟಕ:

- ಫೆಬ್ರವರಿ 2025ರ ಮಾಹೆಯಲ್ಲಿ ಸರ್ಕಾರಿ ಶಾಲೆಗಳ 4 ಮತ್ತು 5 ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಕಲಿಕಾ ನ್ಯೂನ್ಯತೆಯನ್ನು ಸರಿಪಡಿಸಲು ರಾಜ್ಯದ ಎಲ್ಲಾ ಜಿಲ್ಲೆಗಳ CRP ಗಳಿಗೆ ತರಬೇತಿ ನೀಡುವ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಗಣಿತ ಗಣಕ :–

- 2024–25 ನೇ ಸಾಲಿನಲ್ಲಿ ವಿಶೇಷವಾಗಿ ಗಣಿತ ಗಣಕ ಕಾರ್ಯಕ್ರಮವನ್ನು ಆಯ್ದ ಜಿಲ್ಲೆಗಳಲ್ಲಿ ಜಾರಿಗೆ ತರಲಾಗಿದೆ.
- 2024–25ನೇ ಸಾಲಿನಲ್ಲಿ 3, 4 ಮತ್ತು 5ನೇ ತರಗತಿ ವಿದ್ಯಾರ್ಥಿಗಳಿಗಾಗಿ 17 ಜಿಲ್ಲೆಗಳ ಶೈಕ್ಷಣಿಕವಾಗಿ ಹಿಂದುಳಿದ 93 ಬ್ಲಾಕ್ ಗಳಲ್ಲಿ ಗಣಿತದ ಮೂಲ ಕ್ರಿಯೆಗಳನ್ನು ಕಲಿಸಲು ಬೆಂಬಲಿಸುವ ಕಾರ್ಯಕ್ರಮವಾಗಿದೆ. ಒಟ್ಟು 32,252 ಶಿಕ್ಷಕರಿಗೆ ತರಬೇತಿ ನೀಡಲಾಗಿದ್ದು, ಡಿಸೆಂಬರ್–2024 ರ ಮಾಹೆಯಿಂದ ಏಪ್ರಿಲ್ 2025 ರ ಮಾಹೆಯವರೆಗೆ ಮೊಬೈಲ್ ಫೋನ್ ಮೂಲಕ ಗಣಿತದ ಮೂಲ ಪ್ರಕ್ರಿಯೆಗಳಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಕೋಚಿಂಗ್ ನೀಡಲಾಗುತ್ತಿದೆ.
- ಈವರೆಗೆ 1.95 ಲಕ್ಷ ದೂರವಾಣಿ ಕರೆಗಳು ದಾಖಲಾಗಿವೆ.

ಗಣಿತ ಕಲಿಕಾ ಆಂದೋಲನ:

- ವ್ಯವಕಲನ, ಭಾಗಾಕಾರ, ಭಿನ್ನರಾಶಿ ಮತ್ತು ವಿನ್ಯಾಸಗಳಿಗೆ ಆದ್ಯತೆ ನೀಡಿ ಚಟುವಟಿಕೆಗಳ ಮೂಲಕ ಬೋಧಿಸಲು ಕ್ರಮವಹಿಸಲಾಗುತ್ತಿದೆ. ಇದರಲ್ಲಿ ಗಣಿತ ಕಲಿಕಾ ಆಂದೋಲನಾ ಕಿಟ್

| | | |
|---|---|---|
| | | 1.0ನ್ನು ಅಕ್ಷರ Foundation ವತಿಯಿಂದ ವಿನ್ಯಾಸಗೊಳಿಸಿದ್ದು ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸರಬರಾಜು ಮಾಡಲಾಗಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಗಣಿತ ಕಲಿಕಾ ಆಂದೋಲನಾ ಕಿಟ್ 2.0ನ್ನು ಅಕ್ಷರ Foundation ವತಿಯಿಂದ ವಿನ್ಯಾಸಗೊಳಿಸಿದ್ದು, ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸರಬರಾಜು ಮಾಡಲಾಗುವುದು.<br>• ಈ 02 ಕಿಟ್ ಗಳನ್ನು ಬಳಸುವ ಬಗ್ಗೆ ಶಿಕ್ಷಕರಿಗೆ ಹಾಗೂ ಮುಖ್ಯ ಶಿಕ್ಷಕರಿಗೆ You Tube Live ಮುಖಾಂತರ ಅಕ್ಷರ Foundation ನ ಸಹಯೋಗದೊಂದಿಗೆ ಶೂನ್ಯ ಬಜೆಟ್ ಚಟುವಟಿಕೆಯಾಗಿ ತರಬೇತಿಗಳನ್ನು ನೀಡಲಾಗಿದೆ.<br>**ದ್ವಿ ಭಾಷಾ ಚಿತ್ರಸಹಿತ ನಿಘಂಟು (Bilingual Pictorial Dictionary)**<br>• ಪಠ್ಯಾಧಾರಿತ ಚಿತ್ರಸಹಿತ ದ್ವಿಭಾಷಾ ನಿಘಂಟನ್ನು (Bilingual Pictorial Dictionary) DSERT ಮತ್ತು Bal Raksha Bharath ಸಹಯೋಗದಲ್ಲಿ 1 ರಿಂದ 5 ನೇ ತರಗತಿ ಮತ್ತು 6 ರಿಂದ 8 ನೇ ತರಗತಿಗಳಿಗೆ ಪ್ರತ್ಯೇಕವಾಗಿ ಸಿದ್ಧಪಡಿಸಿದೆ.<br>• Pilot ಮಾಡಲು 100 ಶಾಲೆಗಳನ್ನು ಆಯ್ಕೆ ಮಾಡಿಕೊಂಡು Dictionary ಸರಬರಾಜು ಮಾಡಿದೆ ಹಾಗೂ ಸದರಿ ಶಾಲೆಗಳ ಶಿಕ್ಷಕರಿಗೆ Dictionary ಬಳಕೆಯ ಬಗ್ಗೆ ತರಬೇತಿಯನ್ನು |

| | | |
|---|---|---|
| | | ನೀಡಲಾಗಿದೆ. ಸದರಿ ಶಾಲೆಗಳ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಪ್ರತಿಕ್ರಿಯೆ (Feedback) ಪಡೆಯಲು ಕ್ರಮವಹಿಸಲಾಗಿದೆ.<br>• DSERT Websiteಗೆ ಅಪ್ ಲೋಡ್ ಮಾಡಲಾಗಿದ್ದು ಅದನ್ನು ಮತ್ತಷ್ಟು ಉತ್ತಮಗೊಳಿಸಲು ಸಾರ್ವಜನಿಕರಿಂದ ಹಿಮ್ಮಾಹಿತಿ (Feedback) ಪಡೆಯಲು ಅವಕಾಶ ಕಲ್ಪಿಸಲಾಗಿದೆ.<br>**<u>EMTIP ಶಾಲೆಗಳು :-</u>**<br>• 4194 ಶಾಲೆಗಳಲ್ಲಿ ಕನ್ನಡ-ಇಂಗ್ಲಿಷ್, ಉರ್ದು-ಇಂಗ್ಲಿಷ್ ದ್ವಿಭಾಷಾ ಮಾಧ್ಯಮವನ್ನು (Bilingual) ಪ್ರಾರಂಭಿಸಲಾಗಿದೆ.<br>• ಸದರಿ ಶಾಲೆಗಳ 1 ರಿಂದ 5 ನೇ ತರಗತಿಗೆ ಬೋಧಿಸುತ್ತಿರುವ ಶಿಕ್ಷಕರಿಗೆ EMTIP ತರಬೇತಿಯನ್ನು ನೀಡಲಾಗಿದೆ. ಇದರ ಮೂಲಕ ಸದರಿ ಶಾಲೆಗಳ ಮಕ್ಕಳ ಕಲಿಕಾ ಪ್ರಗತಿಗೆ ಆದ್ಯತೆ ನೀಡಲಾಗುತ್ತಿದೆ.<br>• 2024-25 ನೇ ಸಾಲಿನಲ್ಲಿ 6 ನೇ ತರಗತಿಗೆ ಪೂರ್ಣವಾಗಿ ಆಂಗ್ಲ ಮಾಧ್ಯಮದ 1001 ಶಾಲೆಗಳನ್ನು ಪ್ರಾರಂಭಿಸಿದ್ದು, ಸದರಿ ಶಾಲೆಯ ಶಿಕ್ಷಕರಿಗೆ ವಿಷಯವಾರು ತರಬೇತಿಯನ್ನು ನೀಡಿ 'ಮಕ್ಕಳ ಕಲಿಕಾ ಗುಣಮಟ್ಟವನ್ನು ಹೆಚ್ಚಿಸಲು ಕ್ರಮವಹಿಸಲಾಗಿದೆ.<br>• ಆಲೂರು ವೆಂಕಟರಾವ್ ಭಾಷಾ ಕೌಶಲ್ಯ ಕೇಂದ್ರಗಳ ಮೂಲಕ ಕಥೆಗಳ ಮುಖಾಂತರ ಭಾಷಾ ಬೆಳವಣಿಗೆ (Story based pedagogy) ಕಾರ್ಯಕ್ರಮದಡಿಯಲ್ಲಿ ಒಟ್ಟು 200 ಆಡಿಯೋ |

| | | |
|---|---|---|
| | | ಕಥೆಗಳನ್ನು ಸೃಜಿಸಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ. ಅದರ ಮೂಲಕ ಮಕ್ಕಳಲ್ಲಿ ಆಲಿಸಿ ಗ್ರಹಿಸುವ ಮತ್ತು ಅಭಿವ್ಯಕ್ತಪಡಿಸುವ ಕೌಶಲ್ಯಗಳನ್ನು ಬೆಳೆಸಲು ಕ್ರಮವಹಿಸಲಾಗಿದೆ.<br>ECCE-(Early Childhood Care and Education)<br>• ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಹಂತ ಹಂತವಾಗಿ ತೆರೆಯುವ ಮೂಲಕ ಮಕ್ಕಳಿಗೆ 4 ನೇ ವರ್ಷದಿಂದಲೇ ಶಾಲೆಯ ಪರಿಚಯ ಮಾಡಿಸುವ ಮೂಲಕ 1 ನೇ ತರಗತಿಗೆ ಬರುವಾಗ ಪೂರ್ಣ ಪ್ರಮಾಣದ ಕಲಿಕೆಗೆ ಮಗುವನ್ನು ಸಿದ್ದತೆ ಮಾಡಲು ಗುಣಾತ್ಮಕ ಶಿಕ್ಷಣವನ್ನು ನೀಡಲು ಕ್ರಮವಹಿಸಲಾಗುವುದು.<br>• 2024–25ನೇ ಸಾಲಿನಲ್ಲಿ 1008 ಕಲ್ಯಾಣ ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ PAB ಅನುಮೋದಿತ, KPS ಶಾಲೆ ಮತ್ತು PMSRI ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗಿದೆ.<br>• 2024–25ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಬೋಧಿಸುತ್ತಿರುವ ಶಿಕ್ಷಕರಿಗೆ 03 ದಿನಗಳ ತರಬೇತಿಯನ್ನು ಡಯಟ್ ಮೂಲಕ ನೀಡಲಾಗಿದೆ.<br>• ಜಿಲ್ಲಾ ಹಂತದ ಅನುಷ್ಠಾನ ಅಧಿಕಾರಿಗಳಾದ ಡಯಟ್ ನೋಡಲ್ ಅಧಿಕಾರಿಗಳು, ಆಯ್ದ BRC, BRP, CRP ಮತ್ತು ಶಿಕ್ಷಕರಿಗೆ ರಾಜ್ಯ ಹಂತದಲ್ಲಿ ಆಟಿಕೆ ಆಧಾರಿತ ಶಿಕ್ಷಣದ ಬಗ್ಗೆ 02 ದಿನಗಳ ಕಾರ್ಯಾಗಾರವನ್ನು ಆಯೋಜಿಸುವ ಮೂಲಕ |

| | | |
|---|---|---|
| | | ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಸಂತಸದಾಯಕ ಬೋಧನೆಗೆ ಅನುಕೂಲವಾಗುವಂತೆ ಕ್ರಮವಹಿಸಲಾಗಿದೆ.<br>**10 ಅಂಶದ ಕಾರ್ಯಕ್ರಮಗಳು :-**<br>• ಚಟುವಟಿಕೆ (1) ಸೇತುಬಂಧ.<br>• ಚಟುವಟಿಕೆ (2) – ಶಾಲಾ ಶೈಕ್ಷಣಿಕ ಯೋಜನೆ.<br>• ಚಟುವಟಿಕೆ (3) – ಭಾಷಾ ಮಾಸಾಚರಣೆ.<br>• ಚಟುವಟಿಕೆ (4) – ಸ್ಪಷ್ಟ ಓದು, ಶುದ್ಧ ಬರಹ, ಸರಳ ಗಣಿತ.<br>• ಚಟುವಟಿಕೆ (5) – ವಿಷಯ ವೇದಿಕೆ. |
| | | • ಚಟುವಟಿಕೆ (6) – ವಾರದ ವಿಜ್ಞಾನ ಪ್ರಯೋಗ,<br>• ಚಟುವಟಿಕೆ (7) – ವಿಶೇಷ ಅವಧಿ ಹಾಗೂ ಸತತ ಪರಿಶ್ರಮ.<br>• ಚಟುವಟಿಕೆ (8) – ಸಹೋದ್ಯೋಗಿಗಳ ಅವಲೋಕನ ಪಾಠ.<br>• ಚಟುವಟಿಕೆ (9)– ಪುಸ್ತಕದ ಪರಿಚಯ.<br>• ಚಟುವಟಿಕೆ (10) – ರಸ ಪ್ರಶ್ನೆ ಕಾರ್ಯಕ್ರಮ ಈ ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.<br>**ಸೇತುಬಂಧ / ವಿದ್ಯಾಪ್ರವೇಶ:**<br>• 1ನೇ ತರಗತಿಗೆ ಹೊಸದಾಗಿ ದಾಖಲಾಗುವ ಮಕ್ಕಳಿಗೆ ಅನುಕೂಲವಾಗುವಂತೆ ವಿದ್ಯಾ ಪ್ರವೇಶ ಚಟುವಟಿಕೆಗಳ ಹಾಳೆಗಳನ್ನು ನಲಿ–ಕಲಿ ಪಠ್ಯ ಪುಸ್ತಕದಲ್ಲಿ ಅಳವಡಿಸಿ ಗುಣಮಟ್ಟದ ಕಲಿಕೆಗೆ ಕ್ರಮವಹಿಸಲಾಗುತ್ತಿದೆ.<br>• ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ನೈಧಾನಿಕ ಪರೀಕ್ಷೆಯನ್ನು ಮಾಡುವ ಮೂಲಕ 2 ರಿಂದ 10 |

| | | |
|---|---|---|
| | | ನೇ ತರಗತಿ ವಿದ್ಯಾರ್ಥಿಗಳು ಆಯಾ ತರಗತಿಗನುಗುಣವಾಗಿ ಗಳಿಸದ ನಿರೀಕ್ಷಿತ ಕಲಿಕಾಫಲಗಳನ್ನು ಗುರುತಿಸಿಕೊಂಡು ಸೇತುಬಂಧ ಕಾರ್ಯಕ್ರಮವನ್ನು ಅಳವಡಿಸಿ ಪರಿಹಾರ ಬೋಧನೆಯ ಮೂಲಕ ನಿರೀಕ್ಷಿತ ಕಲಿಕಾ ಫಲಗಳ ಗಳಿಕೆಗೆ ಕ್ರಮವಹಿಸಲಾಗುತ್ತಿದೆ. ಈ ಸಂಬಂಧ ಸಾಹಿತ್ಯ ಸಿದ್ಧಪಡಿಸಿ ಡಯಟ್‌ಗಳ ಮೂಲಕ ಮಾರ್ಗದರ್ಶನ ನೀಡಲಾಗುತ್ತಿದೆ ಹಾಗೂ ಸಾಹಿತ್ಯ DSERT Website ನಲ್ಲಿ ಲಭ್ಯವಿದೆ.<br>**ಚಟುವಟಿಕೆ ಆಧಾರಿತ / ಅನುಭವಾತ್ಮಕ ಕಲಿಕೆ:**<br>• ಕಲಿಕಾ ಚೇತರಿಕೆ, ಕಲಿಕಾ ಬಲವರ್ಧನೆ ಉಪಕ್ರಮಗಳ ಅಡಿಯಲ್ಲಿ ಕಲಿಕಾ ಫಲಾಧಾರಿತ ವಿದ್ಯಾರ್ಥಿ ಚಟುವಟಿಕೆ ಪುಸ್ತಕಗಳು ಹಾಗೂ ಶಿಕ್ಷಕರ ಮಾರ್ಗದರ್ಶಿ ಪುಸ್ತಕಗಳನ್ನು ಸಿದ್ಧಪಡಿಸಿ ತರಬೇತಿ ನೀಡುವ ಮೂಲಕ ಮಾರ್ಗದರ್ಶನ ನೀಡಲಾಗಿದೆ ಹಾಗೂ ಶಾಲೆಗಳಿಗೆ ಸರಬರಾಜು ಮಾಡಲಾಗಿದೆ.<br>• ತರಗತಿ ಪ್ರಕ್ರಿಯೆ ಗುಣಮಟ್ಟವನ್ನು ಸುಧಾರಿಸಲು ಕಲಿಕಾ ಫಲಾಧಾರಿತ ಪ್ರಶ್ನೆ ಕೋಠಿಯನ್ನು ಸಿದ್ಧಪಡಿಸಿ ಮಾರ್ಗದರ್ಶನ ನೀಡಿದೆ ಹಾಗೂ ಎಲ್ಲರಿಗೂ ಲಭ್ಯವಾಗುವಂತೆ DSERT Website ನಲ್ಲಿ ಅಳವಡಿಸಿದೆ.<br>• ಕನ್ನಡ, ಇಂಗ್ಲೀಷ್ ಮತ್ತು ಗಣಿತ ವಿಷಯಗಳಿಗೆ ಸಂಬಂಧಿಸಿದಂತೆ ಅಭ್ಯಾಸ ಪುಸ್ತಕಗಳನ್ನು ಸಿದ್ಧಪಡಿಸಿ ಶಾಲೆಗಳಿಗೆ ಸರಬರಾಜು ಮಾಡಿದೆ.<br>• DSERT ಮತ್ತು ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ APP ಆಧಾರಿತ |

| | | |
|---|---|---|
| | | ಅನುಭವಾತ್ಮಕ ಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ ಮತ್ತು ಸಹವರ್ತಿ ಕಲಿಕೆಗೆ ಪ್ರೋತ್ಸಾಹ ನೀಡಲಾಗುತ್ತಿದೆ.<br>**ಕಲಿಕಾ ದೀಪ ಕಾರ್ಯಕ್ರಮ:**<br>• AI ತಂತ್ರಜ್ಞಾನ ಆಧಾರಿತವಾದ ಕಾರ್ಯಕ್ರಮವಾಗಿದ್ದು, ಕನ್ನಡ ಮತ್ತು ಆಂಗ್ಲ ಭಾಷೆಯನ್ನು ಆತ್ಮವಿಶ್ವಾಸದಿಂದ ಆಲಿಸಲು ಮತ್ತು ಓದಲು ಹಾಗೂ ಆರಂಭಿಕ ಗಣಿತದ ಸಾಮರ್ಥ್ಯಗಳನ್ನು ಗಳಿಸಲು ಸಹಕಾರಿಯಾಗಿದೆ.<br>• 2024-25ನೇ ಸಾಲಿಗೆ ಸದರಿ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ತುಮಕೂರು ಮತ್ತು ಕೊಪ್ಪಳ ಜಿಲ್ಲೆಯ ತಲಾ 03 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ EKStep ಸಂಸ್ಥೆಯ ಸಹಯೋಗದೊಂದಿಗೆ ಜಾರಿಗೊಳಿಸಲಾಗಿದ್ದು, ವಿದ್ಯಾರ್ಥಿಗಳು ಭಾಷೆಯನ್ನು ಆಲಿಸುವ, ನಿರರ್ಗಳವಾಗಿ ಮಾತನಾಡುವ ಮತ್ತು ಓದುವ ಸಾಮರ್ಥ್ಯವನ್ನು ಉತ್ತಮ ಪಡಿಸಿಕೊಂಡಿರುತ್ತಾರೆ.<br>**<u>ಜ್ಞಾನ ಸೇತು ಕಾರ್ಯಕ್ರಮ (ಗಣಿತ ಮತ್ತು ವಿಜ್ಞಾನ ವಿಷಯಗಳ ಪರಿಣಾಮಕಾರಿ ಬೋಧನೆ ಮತ್ತು ಕಲಿಕೆಗಾಗಿ)</u>**<br>• ಖಾನ್ ಅಕಾಡೆಮಿ ಸಹಯೋಗದೊಂದಿಗೆ ರಾಜ್ಯದ 6 ರಿಂದ 10 ನೇ ತರಗತಿಯ ಸರ್ಕಾರಿ ಶಾಲೆಗಳಲ್ಲಿ "ಜ್ಞಾನ ಸೇತು" ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.<br>• ರಾಜ್ಯದ 6 ರಿಂದ 10 ನೇ ತರಗತಿಗಳಿಗೆ ಗಣಿತ ಮತ್ತು ವಿಜ್ಞಾನ ಬೋಧನೆ ಮಾಡುತ್ತಿರುವ ಶಿಕ್ಷಕರಿಗೆ ಬೋಧನಾ ವಿಧಾನದಲ್ಲಿ ನಾವೀನ್ಯತೆ |

| | | |
|---|---|---|
| | | ಅಳವಡಿಸಿಕೊಳ್ಳಲು, ಕೃತಕ ಬುದ್ಧಿಮತ್ತೆ ಮತ್ತು ಶೈಕ್ಷಣಿಕ ತಂತ್ರಜ್ಞಾನದ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.<br>• ಕಂಪ್ಯೂಟರ್ ಸೌಲಭ್ಯವನ್ನು ಹೊಂದಿರುವ ರಾಜ್ಯದ 5000 ಸರ್ಕಾರಿ ಶಾಲೆಗಳಲ್ಲಿ 6 ರಿಂದ 10 ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ ಮತ್ತು ತಂತ್ರಜ್ಞಾನದ ಬಳಕೆಯಿಂದ ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ಪರಿಣಾಮಕಾರಿಯಾಗಿ ಕಲಿಯಲು ಅವಕಾಶ ಕಲ್ಪಿಸಲಾಗುವುದು.<br>• ಕಾರ್ಯಕ್ರಮ ಅನುಷ್ಠಾನಕ್ಕಾಗಿ ಸಂಪನ್ಮೂಲ ರಚನೆ ಮತ್ತು ತರಬೇತಿಗಾಗಿ ರೂ.3/- ಕೋಟಿಗಳು ಮತ್ತು ಕಂಪ್ಯೂಟರ್‌ಗಳನ್ನು ಹೊಂದಿರುವ 5000 ಶಾಲೆಗಳಿಗೆ ಇಂಟರ್ನೆಟ್ ಸೌಲಭ್ಯ ಒದಗಿಸಲು ರೂ.6/-ಕೋಟಿಗಳು ಸೇರಿ ಒಟ್ಟಾರೆ ರೂ.9/- ಕೋಟಿಗಳ ಅನುದಾನವನ್ನು 2025-26ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಕೋರಲಾಗಿದೆ. |

ಸಂಖ್ಯೆ: ಇಪಿ 87 ಪಿಎಂಸಿ 2025

(ಎಸ್.ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು